ಶ್ರೀ ಸುರೇಶ್ ಕುಮಾರ್ : Yes.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಏಕೆ ಸಂಪ್ರದಾಯವನ್ನು ಗಾಳಿಗೆ ತೂರುತ್ತೀರಿ ?

ಶ್ರೀ ಸಿದ್ದರಾಮಯ್ಯ : ಚರ್ಚೆಗೆ ಅವಕಾಶವಿಲ್ಲವೇ ?

ಅಧ್ಯಕ್ಷರು : ಇಲ್ಲ. ನಿಮಗೆ 11ನೇ ತಾರೀಖಿನಂದು ಅವಕಾಶ ಕೊಟ್ಟಿದ್ದನ್ನು ನೀವು ಉಪಯೋಗ ಮಾಡಿಲ್ಲ. No.

(ಗೊಂದಲ)

ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : Division ಬೇಕು.

ಅಧ್ಯಕ್ಷರು : ಕೊಡುತ್ತೇನೆ. ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

ಅಧ್ಯಕ್ಷರು : ಈಗ ಇದಕ್ಕೆ Division ಮತ್ತು Head count ಮಾಡಬೇಕೆಂದು ಕೇಳಿರುವುದರಿಂದ ಪ್ರಸ್ತಾವಕ್ಕೆ ಮತ ಎಣಿಕೆಗೆ ಒತ್ತಾಯಿಸಿರುವುರಿಂದ ಈಗ Division Bell ಅನ್ನು ಹಾಕಿಸುತ್ತಿದ್ದೇನೆ. Bell ಹಾಕಿ.

(ಈ ಹಂತದಲ್ಲಿ Bell ಹಾಕಿ ಎರಡು ನಿಮಿಷದ ನಂತರ Bell ನಿಲ್ಲಿಸಲಾಯಿತು)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಬಾಗಿಲನ್ನು ಹಾಕಿಸಿ.

ಅಧ್ಯಕ್ಷರು : ಎಲ್ಲಾ doors ಹಾಕಿ, ಇನ್ನು ಯಾರನ್ನೂ ಒಳಗೆ ಬಿಡಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಶ್ರೀ ಈಶಣ್ಣ ಗುಳಗಣ್ಣವರ್ ರವರ ಆರೋಗ್ಯ ಚೆನ್ನಾಗಿ ಆಗಲಿ, ಅವರು speedy recovery ಆಗಲಿ ಎಂದು I will pray. The question is, ನನಗೆ ಇರುವ information ಪ್ರಕಾರ ಅವರು he is physically, mentally not fit ಎನ್ನತಕ್ಕಂತಹ ಮಾಹಿತಿ ನನಗೆ....

(ಗೊಂದಲ)

ಅಧ್ಯಕ್ಷರು : ಆ ರೀತಿ ಹೇಳಿದರೆ ಹೇಗೆ ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ದಯವಿಟ್ಟು ಯಾರಿಗೂ ಕೂಡ ಆ ರೀತಿ physically, mentally not fit ಎಂದು ಹೇಳುವ ಹಕ್ಕು ನಮಗೆ ಯಾರಿಗೂ ಇಲ್ಲ.

(ಗೊಂದಲ)

ಅಧ್ಯಕ್ಷರು : I will read out, the Medical Certificate.

TO WHOMSOEVER IT MAY CONCERN

This is to certify that Mr. Eshanna Gulganvar, aged 57 years, Member of Legislative Assembly from Yelburgi, Koppal District was admitted in our Hospital one month ago and he has made significant recovery till now, he is fully conscious and mentally stable and his judgment is clear. His diabetic is well under control.

This is the certificate issued by BGS Global Hospital, Bangalore.

Dr. H.C. MAHADEVAPPA : Is that certificate given by the Medical Board ?

Mr. SPEAKER : Yes. That you can challenge. Medical Boardನಿಂದಲೇ ಕೊಡಬೇಕೆಂದು .....

Dr. H.C. MAHADEVAPPA : It speaks that he has sound health ?

ಅಧ್ಯಕ್ಷರು : Yes. ಈಗ ಮತ ಎಣಿಕೆಯನ್ನು ಪ್ರಾರಂಭ ಮಾಡಲಾಗುತ್ತದೆ. ಮೊದಲಿಗೆ ಹೌದು ಎನ್ನುವವರ ಪರವಾಗಿ row by row

ಎಣಿಕೆ ಮಾಡಲಾಗುವುದು. ನಂತರ 'ಇಲ್ಲ' ಎನ್ನುವುದನ್ನು ಆಮೇಲೆ ಎಣಿಕೆ ಮಾಡಲಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಗಳೇ, Divisionಗೆ ನೀವೇ move ಮಾಡಿ, ನೀವೇ ನಿಂತುಕೊಂಡರೆ ಹೇಗೆ ?

SRI D.K. SHIVAKUMAR : Chief Minister does not have the right to vote.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಇನ್ನೊಂದು ensure ಮಾಡಬೇಕು ಏನೆಂದರೆ M.L.C.ಗಳು ಇದ್ದಾರೆಯ ನೋಡಿ.

ಅಧ್ಯಕ್ಷರು : ಇಲ್ಲ.

ಶ್ರೀ ಸಿದ್ದರಾಮಯ್ಯ : ಮೊನ್ನೆ ಇದ್ದರು.

MR. SPEAKER : Strict instruction has been given. ಈಗ counting ನಡೆಯುತ್ತದೆ, ಸಹಕರಿಸಿ.

ಅಧ್ಯಕ್ಷರು : ಒಂದನೇ ಸಾಲಿನ ಮಾನ್ಯ ಸದಸ್ಯರುಗಳು ದಯವಿಟ್ಟು ನಿಂತುಕೊಳ್ಳಿ. ಈಗ ಮತ ಎಣಿಕೆ ಪ್ರಾರಂಭವಾಗುತ್ತದೆ.

(ಈ ಹಂತದಲ್ಲಿ ಮೊದಲನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ಮೊದಲನೇ ಸಾಲಿನ ಸದಸ್ಯರು ಕುಳಿತುಕೊಳ್ಳಿ. ಎರಡನೇ ಸಾಲಿನ ಮಾನ್ಯ ಸದಸ್ಯರುಗಳು ದಯವಿಟ್ಟು ನಿಂತುಕೊಳ್ಳಿ. ಈಗ ಮತ ಎಣಿಕೆ ಪ್ರಾರಂಭವಾಗುತ್ತದೆ.

(ಈ ಹಂತದಲ್ಲಿ ಎರಡನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಎರಡನೇ ಸಾಲಿನ ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ. ಮೂರನೇ ಸಾಲಿನ ಮಾನ್ಯ ಸದಸ್ಯರುಗಳು ದಯವಿಟ್ಟು ನಿಂತುಕೊಳ್ಳಿ. ಈಗ ಮತ ಎಣಿಕೆ ಪ್ರಾರಂಭವಾಗುತ್ತದೆ.

(ಈ ಹಂತದಲ್ಲಿ ಮೂರನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ನಾಲ್ಕನೇ ಸಾಲಿನಲ್ಲಿ ಕುಳಿತಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಪ್ರಾರಂಭವಾಗುತ್ತದೆ. ಶ್ರೀ ಈಶಣ್ಣ ಗುಳಗಣ್ಣನವರನ್ನು ಈ ಸಾಲಿನಲ್ಲಿ ಸೇರಿಸಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಈಶಣ್ಣ ಗುಳಗಣ್ಣನವರ್‌ರವರ ಕೈಯನ್ನಾದರೂ ಎತ್ತಿ ತೋರಿಸಲಿಕ್ಕೆ ಹೇಳಿ.

ಅಧ್ಯಕ್ಷರು : ಮಾನ್ಯ ಸದಸ್ಯರು ಕೈ ಎತ್ತಿದ್ದಾರೆ, ತಾವು ಬೇಕಾದರೆ ಹೋಗಿ ನೋಡಬಹುದು. ಅವರನ್ನು count ಮಾಡಿಕೊಳ್ಳಿ.

(ಈ ಹಂತದಲ್ಲಿ ನಾಲ್ಕನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು. ಸದನದಲ್ಲಿ ಹಾಜರಿದ್ದ ಮಾನ್ಯ ಸದಸ್ಯರಾದ ಶ್ರೀ ಈಶಣ್ಣ ಗುಳಗಣ್ಣನವರ್‌ರವರನ್ನು ನಾಲ್ಕನೇ ಸಾಲಿನ ಮತ ಎಣಿಕೆಗೆ ಸೇರಿಸಲಾಯಿತು)

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ವರ್ತೂರು ಪ್ರಕಾಶ್‌ರವರ ಕುರ್ಚಿ ಆ ಕಡೆ ಹೇಗೆ ಹೋಯಿತು ?

ಅಧ್ಯಕ್ಷರು : ಆಯಿತು.

(ಗೊಂದಲ)

ಅಧ್ಯಕ್ಷರು : ಕೌಂಟ್ ಮಾಡುವುದಕ್ಕೆ ತೊಂದರೆ ಮಾಡಬಾರದಾಗಿ ನಾನು ಪದೇ ಪದೇ ತಮ್ಮಲ್ಲಿ ವಿನಂತಿಸುತ್ತೇನೆ. ಕೌಂಟ್ ಮಾಡುವಾಗ ಆ ಕಡೆ ಈ ಕಡೆ ಮಾತನಾಡುವುದು ಬೇಡ please. ಶ್ರೀ ಈಶಣ್ಣ ಗುಳಗಣ್ಣನವರ್ ಅವರನ್ನು ಈಗಲೇ ಸೇರಿಸಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೇ, ಈಶಣ್ಣ ಗುಳಗಣ್ಣನವರ್ ಅವರನ್ನು ಈಗ ಸೇರಿಸುವಂತಿಲ್ಲ. ಅವರ ಕೈ ಎತ್ತಿ ತೋರಿಸಬೇಕು. ಅವರಿಗೆ ಕೈ ಎತ್ತಿ ತೋರಿಸಲಿಕ್ಕೆ ಹೇಳಿ ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು : ನೀವು ನೋಡಲಿಲ್ಲ, ನಿಮಗೆ ಪ್ರತ್ಯೇಕವಾಗಿ ಅವರಿಂದ ಕೈ ಎತ್ತಿ ತೋರಿಸಬೇಕೆ ? ಆಯಿತು, ಮುಂದಿನ ಸಾಲು ಮತ ಎಣಿಕೆ ಪ್ರಾರಂಭ ಮಾಡಿ.

SRI D.K. SHIVAKUMAR : Nominated member ಗೆ voting powers ಇದೆಯೇ ?

MR. SPEAKER : Nominated member ಗೆ voting power ಇದೆ.

SRI SIDDARAMAIAH : Nominated member ಗೆ voting power ಇರಬೇಕೋ ಬೇಡವೋ ಎಂಬುದು debatable point.

ಅಧ್ಯಕ್ಷರು : ಐದನೇ ಸಾಲಿನಲ್ಲಿ ಕುಳಿತಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಪ್ರಾರಂಭವಾಗುತ್ತದೆ.

(ಈ ಹಂತದಲ್ಲಿ ಐದನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ದಯವಿಟ್ಟು ಐದನೇ ಸಾಲಿನ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ. ಈಗ ಆರನೇ ಸಾಲಿನಲ್ಲಿ ಕುಳಿತಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಪ್ರಾರಂಭವಾಗುತ್ತದೆ.

(ಈ ಹಂತದಲ್ಲಿ ಆರನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಆರನೇ ಸಾಲಿನ ಮಾನ್ಯ ಸದಸ್ಯರುಗಳು ದಯವಿಟ್ಟು ಕುಳಿತುಕೊಳ್ಳಿ. ಈಗ ಏಳನೇ ಸಾಲಿನಲ್ಲಿ ಕುಳಿತಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಪ್ರಾರಂಭವಾಗುತ್ತದೆ.

(ಈ ಹಂತದಲ್ಲಿ ಏಳನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಏಳನೇ ಸಾಲಿನ ಮಾನ್ಯ ಸದಸ್ಯರುಗಳು ದಯವಿಟ್ಟು ಕುಳಿತುಕೊಳ್ಳಿ. ಈಗ ಎಂಟನೇ ಸಾಲಿನಲ್ಲಿ ಕುಳಿತಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಪ್ರಾರಂಭವಾಗುತ್ತದೆ.

(ಈ ಹಂತದಲ್ಲಿ ಎಂಟನೇ ಸಾಲಿನಲ್ಲಿ ಉಪಸ್ಥಿತರಿದ್ದ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ಪ್ರಸ್ತಾವದ ಪರವಾಗಿರುವ ಮಾನ್ಯ ಸದಸ್ಯರುಗಳು ದಯಮಾಡಿ ಕುಳಿತುಕೊಳ್ಳಬೇಕು.

ಈಗ ಪ್ರಸ್ತಾವಕ್ಕೆ 'ಇಲ್ಲ' ಎನ್ನುವ ಮಾನ್ಯ ಸದಸ್ಯರುಗಳ ಮತ ಎಣಿಕೆಯನ್ನು ಪ್ರಾರಂಭ ಮಾಡುತ್ತಿದ್ದೇನೆ. ಪ್ರಸ್ತಾವಕ್ಕೆ 'ಇಲ್ಲ' ಎನ್ನುವ ಮಾನ್ಯ ಸದಸ್ಯರುಗಳು ದಯವಿಟ್ಟು ಎದ್ದು ನಿಂತುಕೊಳ್ಳಬೇಕು.

(ಈ ಹಂತದಲ್ಲಿ 'ಇಲ್ಲ' ಎನ್ನುವ ಮಾನ್ಯ ಸದಸ್ಯರುಗಳ ಮತ ಎಣಿಕೆಯನ್ನು ಪ್ರಾರಂಭ ಮಾಡಲಾಯಿತು.)

ಅಧ್ಯಕ್ಷರು : ಮೊದಲನೇ ಸಾಲಿನ ಮಾನ್ಯ ಸದಸ್ಯರು ಎದ್ದು ನಿಂತುಕೊಳ್ಳಬೇಕು.

(ಈ ಹಂತದಲ್ಲಿ ಮೊದಲನೇ ಸಾಲಿನಲ್ಲಿ ಉಪಸ್ಥಿತರಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ಮೊದಲನೇ ಸಾಲಿನ ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಎರಡನೇ ಸಾಲಿನ ಮಾನ್ಯ ಸದಸ್ಯರು ಎದ್ದು ನಿಂತುಕೊಳ್ಳಬೇಕು.

(ಈ ಹಂತದಲ್ಲಿ ಎರಡನೇ ಸಾಲಿನಲ್ಲಿ ಉಪಸ್ಥಿತರಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ಎರಡನೇ ಸಾಲಿನ ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಮೂರನೇ ಸಾಲಿನ ಮಾನ್ಯ ಸದಸ್ಯರು ಎದ್ದು ನಿಂತುಕೊಳ್ಳಬೇಕು.

(ಈ ಹಂತದಲ್ಲಿ ಮೂರನೇ ಸಾಲಿನಲ್ಲಿ ಉಪಸ್ಥಿತರಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ಮೂರನೇ ಸಾಲಿನ ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ನಾಲ್ಕನೇ ಸಾಲಿನ ಮಾನ್ಯ ಸದಸ್ಯರು ಎದ್ದು ನಿಂತುಕೊಳ್ಳಬೇಕು.

(ಈ ಹಂತದಲ್ಲಿ ನಾಲ್ಕನೇ ಸಾಲಿನಲ್ಲಿ ಉಪಸ್ಥಿತರಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ನಾಲ್ಕನೇ ಸಾಲಿನ ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಐದನೇ ಸಾಲಿನ ಮಾನ್ಯ ಸದಸ್ಯರು ಎದ್ದು ನಿಂತುಕೊಳ್ಳಬೇಕು.

(ಈ ಹಂತದಲ್ಲಿ ಐದನೇ ಸಾಲಿನಲ್ಲಿ ಉಪಸ್ಥಿತರಿರುವ ಮಾನ್ಯ ಸದಸ್ಯರುಗಳ ಮತ ಎಣಿಕೆ ಮಾಡಲಾಯಿತು)

ಅಧ್ಯಕ್ಷರು : ಈಗ ಐದನೇ ಸಾಲಿನ ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಆರನೇ ಸಾಲಿನ ಮಾನ್ಯ ಸದಸ್ಯರು ಎದ್ದು ನಿಂತುಕೊಳ್ಳಬೇಕು.

ಅಧ್ಯಕ್ಷರು : ಈಗ 6ನೇ ಸಾಲಿನ ಮಾನ್ಯ ಸದಸ್ಯರುಗಳ ಮತಗಳ ಎಣಿಕೆ ಪ್ರಾರಂಭವಾಗುತ್ತದೆ.

(ಮಾನ್ಯ ಸದಸ್ಯರುಗಳ ಮತಗಳ ಎಣಿಕೆ ಮಾಡಲಾಯಿತು).

ಅಧ್ಯಕ್ಷರು : ಈಗ 7ನೇ ಸಾಲಿನ ಮಾನ್ಯ ಸದಸ್ಯರುಗಳ ಮತಗಳ ಎಣಿಕೆ ಪ್ರಾರಂಭವಾಗುತ್ತದೆ.

(ಮಾನ್ಯ ಸದಸ್ಯರುಗಳ ಮತಗಳ ಎಣಿಕೆ ಮಾಡಲಾಯಿತು)

ಶ್ರೀ ಸಿದ್ದರಾಮಯ್ಯ : ಈಗ result announce ಮಾಡುವುದಕ್ಕೆ ರಿಪೋರ್ಟ್ ಕೇಳಿದೆ ಅಷ್ಟೆ. ನಮಗೆ 100 ಎಂಬುದು ಗೊತ್ತಾಗಬೇಕು.

ಅಧ್ಯಕ್ಷರು : ಹೈಕೋರ್ಟ್ ಅದಕ್ಕೇನೂ ತಡೆಯೊಡ್ಡಿಲ್ಲ.

ಶ್ರೀ ಸಿದ್ದರಾಮಯ್ಯ : ಯಾವುದು ?

ಶ್ರೀ ಡಿ.ಕೆ. ಶಿವಕುಮಾರ್ : ಅದೇಗೆ ಸ್ವಾಮಿ ? No, No.

(ಗೊಂದಲ)

SRI D.K. SHIVAKUMAR : You can't announce, ಹೇಗೆ ಮಾಡುವುದಕ್ಕಾಗುತ್ತದೆ ?

SRI SIDDARAMAIAH : Result of counting will be subject to the final decision by the High Court.

(ಗೊಂದಲ)

ಅಧ್ಯಕ್ಷರು : ಈಗ ಮತಗಳ ಎಣಿಕೆಗೆ ಒತ್ತಾಯಿಸಿರುವುದರಿಂದ ಮತಗಳನ್ನು ಎಣಿಸಲಾಗಿದೆ. ಎಣಿಕೆಯ ನಂತರ ಈ ಕೆಳಕಂಡಂತೆ ಮತಗಳು ಬಂದಿವೆ.

ಪ್ರಸ್ತಾವದ ಪರವಾಗಿ 106 ಮತಗಳು

ಪ್ರಸ್ತಾವದ ವಿರೋಧವಾಗಿ 100 ಮತಗಳು

ಪ್ರಸ್ತಾವದ ಪರವಾಗಿ 106 ಮತಗಳು ಬಂದಿರುವುದರಿಂದ ಪ್ರಸ್ತಾವವು ಅಂಗೀಕೃತವಾಗಿದೆ ಎಂದು ಘೋಷಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಬೆಳಿಗ್ಗೆ 11 ಗಂಟೆ 34 ನಿಮಿಷಕ್ಕೆ ಮುಕ್ತಾಯಗೊಂಡು, ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)

* * * * *